


ರೋಹಿಣಿ ವೈದ್ಯ ಮತ್ತು ಮಂಗೇಶ್ ತೆಂಡೂಲ್ಕರ್ ಅವರೊಂದಿಗೆ ಭಾವೇಶ್ ದಂಪತಿ

ಅಲ್ಲಿ ಸೇರಿದ್ದರು. ಸಚಿನ್ ಅವರೆಲ್ಲರಿಗೂ ರಾತ್ರಿಯ ಊಟದ ವ್ಯವಸ್ಥೆ ಮಾಡಿದ್ದರು. ಅವರೆಲ್ಲರೂ ಒಂದೆರಡು ನಿಮಿಷಗಳು ಆ ಮೂರು ದಿನದ ಅನುಭವವನ್ನು ಹಂಚಿಕೊಂಡರು. ಭಾವೇಶ್ ಅವರೆಲ್ಲರಿಗೆ ಉಡುಗೊರೆ ಮತ್ತು ಧನ್ಯವಾದದ ಪತ್ರವನ್ನು ಸಿದ್ಧ ಮಾಡಿದ್ದರು. ಅವುಗಳನ್ನು ಮಂಗೇಶ್ ತೆಂಡೂಲ್ಕರ್ ಅವರ ಕೈಯಿಂದ ಕೊಡಿಸಿದರು. ಎಲ್ಲರ ಮನಸ್ಸು ಪ್ರಫುಲ್ಲವಾಗಿತ್ತು. ಭಾವೇಶ್ ಅವರ ಕವಿ ಹೃದಯ ಹಾಡಿತ್ತು:

ಹಮನೆ ತೊ ಜಲಾಯಿ ನಹೀ ಕಭೀ ಛೋಟೀ ಸೀ ಶಮಾ,

ಹಮಾರೆ ಘರ್ ಜಮಾನೆ ಭರ್ ಕೀ ರೋಷನೀ ಆ ಗಯೀ

(ನಾನೆಂದೂ ಸಣ್ಣ ಹಣತೆಯನ್ನೂ ಹಚ್ಚಿರಲಿಲ್ಲ,

ಇಡೀ ಜಗತ್ತಿನ ಬೆಳಕೇ ನಮ್ಮ ಮನೆಗೆ ಆಗಮಿಸಿದೆ)

ತಿಲಕ ಸ್ಮಾರಕ ಪ್ರದರ್ಶನ ಕೈಯಲ್ಲಿ ಒಂದಿಷ್ಟು ಹಣ ಉಳಿಯುವಂತೆ ಮಾಡಿತ್ತು. ಮೊದಲಿಗೆ ಅಮ್ಮನ ಕ್ಯಾನ್ಸರ್ ಚಿಕಿತ್ಸೆಗೆ ಮಾಡಿದ್ದ ಲಕ್ಷಾಂತರ ರೂಪಾಯಿಯ ಸಾಲವನ್ನು ತೀರಿಸಿದರು. ತಮ್ಮನ್ನು ಕಾಡಿ ಹಣವನ್ನು ಹಿಂತಿರುಗಿಸು ಎಂದ ಕೆಲವರು ಸಂಕೋಚದಿಂದ, 'ಪರವಾಗಿಲ್ಲ' ಎಂದು ಮುಜುಗರ ಪಟ್ಟುಕೊಂಡಾಗ ಅವರ ಕಾಲಿಗೆ ಪ್ರಣಾಮ ಮಾಡಿ ತಮ್ಮ ಕಷ್ಟದ ಕಾಲದಲ್ಲಿ ನೀಡಿದ ಹಣವನ್ನು ಒಂದೊಂದು ಪೈಸೆಯೂ ಅವರಿಗೆ ಹಿಂತಿರುಗಿಸಿ ಋಣಮುಕ್ತರಾದರು.

* * *

ಇಷ್ಟೆಲ್ಲ ಮೋಂಬತ್ತಿಯ ಉದ್ಯಮದಲ್ಲಿ ತೊಡಗಿದ್ದರೂ, ಅಂಧ ಮಿತ್ರರ ತಂಡವನ್ನು ಕಟ್ಟುತ್ತಿದ್ದರೂ, ಅದರ ಜೊತೆಯಲ್ಲಿಯೇ ಭಾವೇಶ್ ತಮ್ಮ ಕ್ರೀಡಾಸಕ್ತಿಯನ್ನು ಉಳಿಸಿಕೊಂಡು ಬಂದಿದ್ದರು. ಕಾಲೇಜಿನಲ್ಲಿ ಶಾಟ್‌ಪುಟ್, ಡಿಸ್ಕಸ್ ಮತ್ತು ಜ್ಯಾವಲಿನ್ ಎಸೆಯುವುದನ್ನು ಚೆನ್ನಾಗಿಯೇ ಕಲಿತು ಅಭ್ಯಾಸ ಮಾಡಿದ್ದರು. ಎಂ.ಎ. ಓದುವಾಗ ತಾಯಿಯ ಅನಾರೋಗ್ಯ ಅವರ ಎಲ್ಲ ಕ್ರೀಡೆಗಳಿಗೆ ಇತಿಶ್ರೀ ಹಾಡಿತ್ತು. ತಾಯಿ ತೀರಿಕೊಂಡ ಆ ಹೊತ್ತು ಮೈತುಂಬಾ ಸಾಲ. ತನ್ನ ಮತ್ತು ತಂದೆಯ ಹೊಟ್ಟೆ ಹೊರೆಯುವುದೇ ಕಷ್ಟವಾಗಿತ್ತು. ಅನೇಕ ಬಾರಿ ಶಾಲೆಯಲ್ಲಿ ಗೆದ್ದ ಪದಕಗಳನ್ನು ಮಾರಿ ಒಂದಿಷ್ಟು ಧಾನ್ಯ ತರುವವರೆಗೂ ಯೋಚಿಸಿದ್ದುಂಟು. ಮೋಂಬತ್ತಿಯ ತಯಾರಿಕೆ ಆರಂಭ ಮಾಡಿ, ಮಾರಾಟ ಮಾಡುತ್ತಾ, ನೀತಾ ಅವರ ಬದುಕಿಗೆ ಕಾಲಿಟ್ಟು ಬದುಕು ಹಸನಾಗಿ ಹಳಿಗೆ ಬಂದಾಗ, ನೀತಾ ಅವರ ಆಗ್ರಹದ ಮೇರೆಗೆ ಮತ್ತೆ ಕ್ರೀಡೆಗೆ ಭಾವೇಶ್ ಹಿಂತಿರುಗಿದರು. ಆಗವರಿಗೆ 30ರ ಹತ್ತಿರದ ವಯಸ್ಸು.

ಒಂದು ದಿನ ಸತಾರಾದಿಂದ ಅವರ ಓರ್ವ ಅಂಧ ಮಿತ್ರರ ಫೋನ್ ಬಂದಿತ್ತು. ಆ ಬಾರಿ ಪ್ಯಾರಾಒಲಿಂಪಿಕ್ ಜಿಲ್ಲಾ ಮಟ್ಟದ ಕ್ರೀಡಾಸ್ಪರ್ಧೆ ಡಿಸೆಂಬರ್ 3ರ 'ವಿಶ್ವ ಅಂಗವಿಕಲರ ದಿನ'ದಂದು ಏರ್ಪಡಿಸಿದ್ದರು. ಹಿಂದಿನ ದಿನವೇ ಅಲ್ಲಿಗೆ ತಲುಪಬೇಕಿತ್ತು. ಇರಲು ಸ್ಟೇಡಿಯಂನಲ್ಲಿ ವ್ಯವಸ್ಥೆ ಮಾಡಲಿದ್ದರು. ಭಾವೇಶ್ ಅಲ್ಲಿಗೆ ತಲುಪಿದರು. ಭಾವೇಶ್ 100 ಮೀಟರ್ ಈಜು, ಶಾಟ್‌ಪುಟ್, ಡಿಸ್ಕಸ್ ಮತ್ತು ಜ್ಯಾವಲಿನ್ ಎಸೆಯುವ ನಾಲ್ಕೂ ಕ್ರೀಡೆಗಳಲ್ಲಿ ತಮ್ಮ ಹೆಸರನ್ನು ಬರೆಸಿದರು. ಮರುದಿನ ಅಂಧರ ಈಜುವ ಸ್ಪರ್ಧೆ. ಪೂರ್ಣ ಕುರುಡರಾದ ಇವರು ಮೇಲಿನಿಂದ ಹಾರಿ ನೀರಿಗೆ ಬೀಳುವಂತಿರಲಿಲ್ಲ. ನೀರಿನಲ್ಲಿಯೇ ಇಳಿದು, ಗೋಡೆಗೆ ಕಾಲು ಒಡಿದು ಮುಂದಕ್ಕೆ ಚಿಮ್ಮಿ ಈಜುವುದಿತ್ತು. ಡಿಸೆಂಬರ್ ದಿನಗಳ ಅತಿ ಚಳಿಯಲ್ಲಿ ನಡುಗುತ್ತಿದ್ದರೂ ಈಜುವ ಉತ್ಸಾಹ.

ಈಜುವ ಕೊಳದ ಉದ್ದ 50 ಮೀಟರ್ ಇತ್ತು. ಹಾಗಾಗಿ ಅದರ ಎರಡು ಸುತ್ತು ಬರಬೇಕಿತ್ತು. ಭಾವೇಶ್ ಬಂದೂಕಿನ ಶಬ್ದ ಕೇಳಿದೊಡನೆ ಹಿಂದಿದ್ದ ಗೋಡೆಗೆ ಜೋರಾಗಿ ಕಾಲು ಒದ್ದು ಮುಂದಕ್ಕೆ ಹಾಯ್ದು ಈಜಿದರು. ಇವರು ಈಜಿದಂತೆ, ಎದುರಿಂದ ಜನರು ಇವರ ಹೆಸರು ಹಿಡಿದು ಕೂಗುವುದು ಕೇಳಿಸಿತು. ಎದುರಿನ ಗೋಡೆ ಮುಟ್ಟಿದೊಡನೆ ಮತ್ತೆ ಹಿಂದಕ್ಕೆ ಈಜತೊಡಗಿದರು. ಆಗಲೇ ಅವರಿಗೆ ತಿಳಿದದ್ದು, ತಮ್ಮ ಜೊತೆಯ ಪ್ರತಿಸ್ಪರ್ಧಿಗಳು ಇನ್ನೂ 50 ಮೀಟರ್ ಗೋಡೆಯನ್ನು ತಲುಪಿಲ್ಲ. ಕಲೆಕ್ಟರ್ ಸಾಹೇಬರು ವಿಕ್ಟರಿ ಸ್ಟ್ಯಾಂಡ್‌ನಲ್ಲಿ ನಿಂತ ಭಾವೇಶ್ ಅವರಿಗೆ ಚಿನ್ನದ ಪದಕವನ್ನು ತೊಡಿಸಿದರು. ಉಳಿದ ಸ್ಪರ್ಧೆಗಳಲ್ಲಿಯೂ ಗೆದ್ದು ಬಂದಿದ್ದರು.

ಇದಾದ ಎರಡು ತಿಂಗಳಲ್ಲಿ ಸತಾರಾ ಪ್ಯಾರಾಒಲಿಂಪಿಕ್ ಸಮಿತಿಯಿಂದ ಫೋನ್ ಬಂದಿತು. ನಾಸಿಕ್‌ನಲ್ಲಿ ಆಯೋಜಿಸಿದ ರಾಜ್ಯಮಟ್ಟದ ಸ್ಪರ್ಧೆಗಳಿಗೆ ಭಾಗವಹಿಸಲು ಆಹ್ವಾನ. ಕೆಲವೇ ದಿನಗಳಲ್ಲಿ ಮತ್ತಷ್ಟು ಅಭ್ಯಾಸ ಮಾಡಿ, ಮತ್ತೆ ತಮ್ಮ ಪ್ರಿಯವಾದ ನಾಲ್ಕೂ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಎರಡು ಚಿನ್ನದ ಮತ್ತು ಎರಡು ಬೆಳ್ಳಿಯ ಪದಕಗಳನ್ನು ಗಳಿಸಿದರು. ಅಲ್ಲಿ ಅನೇಕ ರಾಷ್ಟ್ರೀಯ ಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳ ಭೇಟಿ, ಸ್ನೇಹ ಇವರಿಗೆ ಸಹಾಯವಾಗಲಿತ್ತು.

ಮಹಾಬಲೇಶ್ವರ ತಲುಪಿದೊಡನೆ ಸ್ವಂತದ ಒಂದು ಶಾಟ್‌ಪುಟ್, ಡಿಸ್ಕಸ್ ಮತ್ತು ಜ್ಯಾವಲಿನ್ ಪಡೆದರು. ಎರಡು ಇಟ್ಟಿಗೆ ಇಟ್ಟು ಪುಷ್ ಅಪ್ಸ್ ಮಾಡಲು ತೊಡಗಿದರು. ನೀತಾ ಪ್ರತಿದಿನ ಅವರಿಗೆ ಪ್ರಾಕ್ಟೀಸ್ ಮಾಡಿಸಲು ಹತ್ತಿರದ ಮೈದಾನಕ್ಕೆ ಕರೆದೊಯ್ಯುವರು. ಇವರು ಎಸೆದಂತೆ ಟೇಪನ್ನು ಕೈಯಲ್ಲಿ ಹಿಡಿದು ಅದರ ದೂರವನ್ನು ಅಳೆಯುವರು. ಅದು ರಾಷ್ಟ್ರೀಯ ದಾಖಲೆಯಿಂದ ಎಷ್ಟು ಕಡಿಮೆ ಇದೆ ಹೇಳುವರು. ಹೀಗೆ ರಾಷ್ಟ್ರೀಯ ಮಟ್ಟದ ಕ್ರೀಡೆಗೆ ಅಭ್ಯಾಸ ಮಾಡಿದರು. ಆ ಬಾರಿ ರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿದರು. ಆದರೆ ಒಂದೂ ಸ್ಪರ್ಧೆಯಲ್ಲಿ ಗೆಲ್ಲಲು ಆಗಲಿಲ್ಲ. ನಾಲ್ಕನೆಯ, ಇಲ್ಲವೇ ಐದನೆಯ ಸ್ಥಾನದಲ್ಲಿ ನಿಂತಿದ್ದರು. ತಮ್ಮ ಪರಿಶ್ರಮದಲ್ಲಿಯೇ ಮಿತಿ ಇದೆ, ಮತ್ತಷ್ಟು ಜೋರಿನಿಂದ ತಯಾರಾಗುವ ಪಣ ತೊಟ್ಟು ಹಿಂತಿರುಗಿದರು. 1999ರಿಂದ 2003ರ ನಡುವಿನ ನಾಲ್ಕು ವರ್ಷಗಳ ಅವಧಿಯಲ್ಲಿ ಭಾವೇಶ್ ಬಹಳಷ್ಟು ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದರು. 2003ರ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು ಬೆಂಗಳೂರಿನ ವಿಶಾಲವಾದ ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿತವಾಗಿತ್ತು. ಆ ದಿನಗಳಲ್ಲಿ ವಿಜಯ್ ಮುನೇಶ್ವರ್ ಅವರು ಮಹಾರಾಷ್ಟ್ರ ಪ್ಯಾರಾಒಲಿಂಪಿಕ್ಸ್‌ನ ಅಧ್ಯಕ್ಷರಾಗಿದ್ದರು. ಅವರಿಂದ ಬಹಳಷ್ಟು ಮಾರ್ಗದರ್ಶನ ದೊರೆಯಿತು. ಒಂದು ಕಡೆ ನಿಂತು 11.5 ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆಯುವ ಕ್ಷಮತೆ ಅವರಿಗೆ ಲಭಿಸಿತ್ತು. ಅಂದು ಕಂಠೀರವ ಸ್ಟೇಡಿಯಂನಲ್ಲಿ 12.9 ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆದಾಗ ಅದು ಹೊಸ ರಾಷ್ಟ್ರೀಯ ರೆಕಾರ್ಡ್ ಆಯಿತು. ತಕ್ಷಣ ಅವರನ್ನು ಡೋಪಿಂಗ್ ಪರೀಕ್ಷೆಗೆ ಒಳಪಡಿಸಿದರು. ಭಾವೇಶ್ ಎಂದೂ ಅಡ್ಡ ಹಾದಿಯಿಂದ ಗೆಲ್ಲಲು ಪ್ರಯತ್ನಿಸಿದವರಲ್ಲ. ಡೋಪಿಂಗ್ ಟೆಸ್ಟ್ ಪಾಸ್ ಆದ ಭಾವೇಶ್ ಅವರಿಗೆ ಭಾರತದ ಪ್ಯಾರಾಒಲಿಂಪಿಕ್‌ನ ಅಧ್ಯಕ್ಷರಾದ ಅಹಮದ್ ಅವರು ಚಿನ್ನದ ಪದಕ ತೊಡಿಸಿದರು. ಈ ಮೂಲಕ ಭಾವೇಶ್ ರಾಷ್ಟ್ರೀಯ ಮಟ್ಟದ ಕ್ರೀಡಾಪಟುವಾದರು.

(ಸಶೇಷ)